ಎಂ.ವಿ.ಸಿ ನಂ.436/2018 ರಲ್ಲಿ
ಪಿ.ಡಬ್ಲ್ಯೂ-1(ಕೆ.ಎಂ.ಮಲ್ಲೇಶ್)

ದಿನಾಂಕ 31.03.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1 ನೇ ಎದುರುದಾರರ ಪರ ವಕೀಲರಿಂದಃ-

ನನ್ನ ಚಾಲನಾ ಪರವಾನಗಿ ಇದ್ದು, ಅದನ್ನು ಹಾಜರುಪಡಿಸಬಹುದು. ಅಪಘಾತದ ಸಮಯದಲ್ಲಿ ನಾನು ಚಾಲನೆ ಮಾಡುತ್ತಿದ್ದ ವಾಹನ ನನ್ನ ಅಕ್ಕನ ಮಗ ಶಿವಪ್ರಕಾಶ್‌ಗೆ ಸೇರಿದ್ದು ಇರುತ್ತದೆ. ಸದರಿ ವಾಹನಕ್ಕೆ ವಿಮೆಯಿದ್ದು, ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ. ಅಪಘಾತದ ಸಮಯದಲ್ಲಿ ನಾನು ಹೆಲ್ಮೆಟ್ ಧರಿಸಿರಲಿಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ನಾನು ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರದಲ್ಲಿ ದೂರನ್ನು ಕೊಟ್ಟಿರುತ್ತೇನೆ. ನನ್ನ ವಾಹನಕ್ಕೆ ಡಿಕ್ಕಿಪಡಿಸಿದ ಮೋಟಾರ್ ಸೈಕಲ್‌ನ ನೋಂದಣಿ ಸಂಖ್ಯೆ ನನಗೆ ಯಾವಾಗ ಗೊತ್ತಾಯಿತು ಎಂದು ನನಗೆ ನೆನಪಿಲ್ಲ. ಅಪಘಾತದ ಸಮಯದಲ್ಲಿ ನನ್ನೊಂದಿಗೆ ಬೇರೆ ಯಾರೂ ಇರಲಿಲ್ಲ. ಅಪಘಾತವಾದ ನಂತರದಲ್ಲಿ ನನಗೆ ಪ್ರಜ್ಞೆ ಹೋಗಿರಲಿಲ್ಲ.

2. ಅಪಘಾತವಾದ ನಂತರ ನನ್ನನ್ನು ನನ್ನ ಹೆಂಡತಿ ಹಾಗೂ ನನ್ನ ಭಾವ ಮೆಡಿಕೇರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನನ್ನ ವಾಹನಕ್ಕೆ ಡಿಕ್ಕಿಪಡಿಸಿದ ವಾಹನ ನೋಂದಣಿ ಸಂಖ್ಯೆ ಕೆಎ-42-ಡಬ್ಲ್ಯೂ-1360 ಎನ್ನುವ ವಿಚಾರ ನನಗೆ ದೂರು ದಾಖಲಾದ ನಂತರದಲ್ಲಿ ಗೊತ್ತಾಯಿತು. ಸದರಿ ವಾಹನದ ನೋಂದಣಿ ಸಂಖ್ಯೆಯನ್ನು ನನಗೆ ಅರಳಾಳು ಗ್ರಾಮಸ್ಥರು ತಿಳಿಸಿದರು. ಸದರಿ ಗ್ರಾಮಸ್ಥರ ಹೆಸರು ನನಗೆ ಗೊತ್ತಿಲ್ಲ. ನನಗೆ ದೂರನ್ನು ಕೊಟ್ಟ ನಂತರದಲ್ಲಿ ವಾಹನದ ನೋಂದಣಿ ಸಂಖ್ಯೆ ಗೊತ್ತಾಯಿತು ಎಂದು ಹೇಳಿದ್ದು, ದೂರಿನಲ್ಲಿ ಸದರಿ ವಾಹನದ

ನೋಂದಣಿ ಸಂಖ್ಯೆಯನ್ನು ಬರೆಯಲಾಗಿತ್ತೇ ಎನ್ನುವುದು ನನಗೆ ನೆನಪಿಲ್ಲ. ನಾನು ಆಸ್ಪತ್ರೆಯಲ್ಲಿ ನನ್ನ ವಾಹನಕ್ಕೆ ಡಿಕ್ಕಿಪಡಿಸಿತ್ತು ಎಂದು ಹೇಳಲಾದ ವಾಹನದ ನೋಂದಣಿ ಸಂಖ್ಯೆಯನ್ನು ಹೇಳಿಲ್ಲ. ನಾನು ಇದುವರೆವಿಗೂ ಸದರಿ ವಾಹನವನ್ನು ನೋಡಿಲ್ಲ. ಪೊಲೀಸರು ನನಗೆ ಸದರಿ ವಾಹನವನ್ನು ತೋರಿಸಿದ್ದರು. ಅಪಘಾತವಾದ ಎಷ್ಟು ದಿನಗಳ ನಂತರ ಪೊಲೀಸರು ನನಗೆ ಸದರಿ ವಾಹವನ್ನು ತೋರಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಸದರಿ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರು ಎನ್ನುವ ವಿಚಾರವನ್ನು ಪೊಲೀಸರಲ್ಲಿ ಕೇಳಿಲ್ಲ. ನನಗೆ ಸದರಿ ವಾಹನದ ಬಣ್ಣ ಗೊತ್ತಿಲ್ಲ. ನನ್ನ ಮೋಟಾರ್ ಸೈಕಲ್‌ನ ಬಲಭಾಗ ಜಖಂಗೊಂಡಿತ್ತು. ನನ್ನ ವಾಹನಕ್ಕೆ ಅಪಘಾತಪಡಿಸಿತು ಎಂದು ಹೇಳಲಾದ ವಾಹನದ ಯಾವ ಭಾಗ ಜಖಂಗೊಂಡಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಪೊಲೀಸರು ವಾಹನಗಳ ತಪಾಸಣೆ ಮಾಡಿರುವ ಸಂಬಂಧಿತ ದಾಖಲೆಗಳನ್ನು ನನಗೆ ಕೊಟ್ಟಿಲ್ಲ. ನನಗೆ ದಿನಾಂಕ 08.11.2017 ರವರೆಗು ನನ್ನ ವಾಹನಕ್ಕೆ ಅಪಘಾತಪಡಿಸಿದ ವಾಹನದ ನೋಂದಣಿ ಸಂಖ್ಯೆ ಗೊತ್ತಿರಲಿಲ್ಲ. ಅದೇ ಕಾರಣಕ್ಕಾಗಿ ನಾನು ದೂರನ್ನು ಕೊಡುವಾಗ ಪೊಲೀಸರಿಗೆ ವಾಹನದ ನೋಂದಣಿ ಸಂಖ್ಯೆ ಹೇಳಿಲ್ಲ ಎನ್ನುವುದು ನಿಜ. ನಾನು ಇದುವರೆವಿಗೂ ಕೆಎ-42-ಡಬ್ಲ್ಯೂ-1360 ನೋಂದಣಿಯ ವಾಹನವನ್ನು ನೋಡಿಲ್ಲ ಎನ್ನುವುದು ಹಾಗೂ ಅದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎನ್ನುವುದು ನಿಜ.

3. ನಿಮ್ಮ ಅರ್ಜಿಯಲ್ಲಿ ಹಾಗೂ ನಿಮ್ಮ ಪ್ರಮಾಣಪತ್ರದಲ್ಲಿ ಕೆಎ-42-ಡಬ್ಲ್ಯೂ-1360 ಸಂಖ್ಯೆಯ ವಾಹನ ನಿಮಗೆ ಡಿಕ್ಕಿಪಡಿಸಿತು ಎಂದು ಯಾವ ಆಧಾರದ ಮೇಲೆ ಹೇಳಿದ್ದೀರಿ? ಎಂದರೆ ಸಾಕ್ಷಿಯು ನನಗೆ

ಅಪಘಾತಪಡಿಸಿದವರು ಬಂದಿದ್ದರು ಹಾಗೂ ನಮ್ಮ ಮನೆಯವರು ಸಹ ಹೇಳಿದ್ದರು ಎಂದು ನುಡಿಯುತ್ತಾರೆ. ನನಗೆ ಅಪಘಾತಪಡಿಸಿದವರು ಬಂದಿದ್ದರು ಎಂದು ಹೇಳುತ್ತಿರುವ ವ್ಯಕ್ತಿಗಳನ್ನು ವಿಚಾರಣೆ ಮಾಡಲು ಸಾಧ್ಯವಿಲ್ಲ. ಆ ರೀತಿ ಬಂದಿದ್ದವರು ಯಾರು ಎಂದು ಅವರ ಹೆಸರು ಹೇಳಲು ನನಗೆ ಗೊತ್ತಿಲ್ಲ. ನಾನು ಹೇಳುತ್ತಿರುವ ನೋಂದಣಿ ಸಂಖ್ಯೆ ವಾಹನದಿಂದ ನನಗೆ ಅಪಘಾತವಾಗಿಲ್ಲ ಎನ್ನುವುದು ಹಾಗೂ ನಾನು, 1 ನೇ ಎದುರುದಾರರು ಹಾಗೂ ಪೊಲೀಸರು ಶಾಮೀಲಾಗಿ ಸದರಿ ವಾಹನದ ಬಗ್ಗೆ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎನ್ನುವುದು ಸರಿಯಲ್ಲ. ಅದೇ ಕಾರಣಕ್ಕಾಗಿ ನಾನು ವಾಹನ ಅಮಾನತು ಪಂಚಾನಾಮೆ, ಐ.ಎಂ.ವಿ ವರದಿ ಹಾಗೂ ಸ್ಥಳ ಪಂಚನಾಮೆಯನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ.

4. ನನಗೆ ಯಾವುದೇ ಶಸ್ತ್ರಚಿಕಿತ್ಸೆ ಮಾಡಲಾಗಿಲ್ಲ, ಸಾಕ್ಷಿಯು ಮುಂದುವರೆದು ನನ್ನ ತಲೆಗೆ ಪೆಟ್ಟಾಗಿದ್ದು ಹೊಲಿಗೆ ಹಾಕಲಾಗಿತ್ತು ಎಂದು ನುಡಿಯುತ್ತಾರೆ. ನಾನು ದಿನಾಂಕ 07.11.2017 ರಂದು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದು ಅಂದಿನಿಂದ ಇಲ್ಲಿಯವರೆಗೂ ಯಾವುದೇ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿಲ್ಲ. ನಾನು ದಿನಾಂಕ 04.11.2017 ರಿಂದ 07.11.2017 ರವರೆಗೆ ಒಳರೋಗಿಯಾಗಿ ದಾಖಲಾಗಿದ್ದೆ ಎಂದು ಬರೆಸಲಾಗಿದ್ದು ಸದರಿ ಆಸ್ಪತ್ರೆಯ ಬಿಡುಗಡೆ ಪ್ರಮಾಣಪತ್ರವನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು 2 ಲಕ್ಷ ರೂಗಳನ್ನು ಖರ್ಚು ಮಾಡಿರುವುದಾಗಿ ಹೇಳಿರುವ ಸಂಬಂಧ ದಾಖಲೆ ಇರುವುದಿಲ್ಲ. ನಾನು ಹಾಜರುಪಡಿಸಿರುವ ನಿಪಿ-8 ರಲ್ಲಿರುವ ಮೊದಲನೇ ಬಿಲ್ಲಿಗೆ ಸಂಬಂಧಿಸಿದಂತೆ ಬಿಲ್ ನಂ.15 ಅದರ ಪಾವತಿ

ರಶೀದಿಯಾಗಿರುತ್ತದೆ ಎನ್ನುವುದು ನಿಜ. ಬಿಲ್ ನಂ.6 ಹಾಗೂ 14 ನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಬಿಲ್ಲುಗಳನ್ನು ನನಗೆ ಪರಿಚಯವಿರುವ ವೈದ್ಯರೊಂದಿಗೆ ಶಾಮೀಲಾಗಿ ಸೃಷ್ಟಿಸಿ ಹಾಜರುಪಡಿಸಲಾಗಿದೆ ಎನ್ನುವುದು ಸರಿಯಲ್ಲ. ಸದರಿ ಬಿಲ್ಲುಗಳನ್ನು ನೀಡಿರುವ ಸಂಬಂಧಪಟ್ಟ ಆಸ್ಪತ್ರೆಯ ಸಿಬ್ಬಂದಿಯನ್ನು ಕರೆಯಿಸಿ ವಿಚಾರಣೆ ಮಾಡಲು ಸಾಧ್ಯವಿಲ್ಲ. ನಿಜಾಂಶ ಹೊರಬರುತ್ತದೆಂಬ ಉದ್ದೇಶಕ್ಕಾಗಿ ಸಂಬಂಧಪಟ್ಟ ಸಿಬ್ಬಂದಿಯನ್ನು ಕರೆಸಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

5. ನನ್ನ ಪ್ರಮಾಣಪತ್ರದಲ್ಲಿ ನಾನು 6 ತಿಂಗಳು ವಿಶ್ರಾಂತಿಯಲ್ಲಿದ್ದು ಮಾಸಿಕ 5,000/- ವೇತನದಂತೆ ಒಬ್ಬ ಸಹಾಯಕರನ್ನು ನೇಮಿಸಿಕೊಂಡಿದ್ದೆನೆಂದು ಹೇಳಿರುವುದನ್ನು ಸಾಬೀತುಪಡಿಸಲು ದಾಖಲೆ ಇರುವುದಿಲ್ಲ. ಈ ದಿನಕ್ಕೂ ಸಹ ನಾನು ಫಿಜಿಯೋಥೆರಪಿ ಪಡೆದುಕೊಳ್ಳುತ್ತಿರುವುದಾಗಿ ಬರೆಸಿದ್ದು ಆ ರೀತಿ ಫಿಜಿಯೋಥೆರಪಿ ಪಡೆದುಕೊಳ್ಳುವಂತೆ ವೈದ್ಯರು ನೀಡಿರುವ ಸಲಹಾ ಚೀಟಿ ಇರುವುದಿಲ್ಲ.

6. ನಾನು ಈಗ ಸೈಬರ್ ಸೆಂಟರ್ ನಡೆಸುತ್ತಿದ್ದು, ವ್ಯವಸಾಯ ಹಾಗೂ ಗುತ್ತಿಗೆ ಕೆಲಸಗಳನ್ನು ನಿರ್ವಹಿಸುತ್ತಿದ್ದೇನೆ. ಈ ಎಲ್ಲದ್ದರಿಂದ ನನಗೆ ವಾರ್ಷಿಕ ನಾಲ್ಕರಿಂದ ನಾಲ್ಕೂವರೆ ಲಕ್ಷ ರೂಗಳ ಆದಾಯವಿರುತ್ತದೆ. ನಾನು ಆದಾಯ ತೆರಿಗೆ ಪಾವತಿಸುತ್ತೇನೆ. 2017 ರಲ್ಲಿ ನನ್ನ ವಾರ್ಷಿಕ ಆದಾಯ ಈಗ ಇರುವ ಆದಾಯಕ್ಕಿಂತಲೂ ಸುಮಾರು 50 ಸಾವಿರ ಕಡಿಮೆ ಇತ್ತು. ಈಗ ನನ್ನ ಮಾಸಿಕ ಆದಾಯ 25 ರಿಂದ 30 ಸಾವಿರ ರೂಗಳು ಎಂದು ಹೇಳುವ ಸಂಬಂಧ ದಾಖಲೆ ಇರುವುದಿಲ್ಲ.

ನನ್ನ ಪ್ರಮಾಣಪತ್ರದಲ್ಲಿ ನನೆಗ ಮಾಸಿಕ ತೊಂದರೆಯಾಗಿದ್ದು ನನ್ನನ್ನು ನೋಡಿಕೊಳ್ಳಲು ಒಬ್ಬರು ಇರಲೇಬೆಕೆಂದು ಹೇಳಿರುವ ಸಂಬಂಧ ವೈದ್ಯರು ನೀಡಿರುವ ಪ್ರಮಾಣಪತ್ರ ಇರುವುದಿಲ್ಲ, ನನಗೆ ಈ ಅಪಘಾತದಿಂದ ಮಾನಸಿಕವಾಗಿ ಅಥವಾ ದೈಹಿಕವಾಗಿ ಅಥವಾ ಆರ್ಥಿಕವಾಗಿ ಯಾವುದೇ ತೊಂದರೆಯಾಗಿಲ್ಲ ಎನ್ನುವುದು ಸರಿಯಲ್ಲ. ನನಗೆ ಕೇವಲ ತರಚಿದ ಗಾಯಗಳಾಗಿದ್ದು ತೀವ್ರ ಸ್ವರೂಪದ ಗಾಯಗಳಾಗಿಲ್ಲದ ಕಾರಣ ಆಸ್ಪತ್ರೆಯ ಬಿಡುಗಡೆ ಪ್ರಮಾಣಪತ್ರವನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ. ನನ್ನ ಅನುಕೂಲಕ್ಕೆ ತಕ್ಕಂತೆ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.